ಸರ್ಕಾರದ ಹತ್ತಿರ ಉತ್ತರ ಏಕೆ ರೆಡಿ ಇಲ್ಲ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. ಮುಂದಿನ ವಾರ ಹಾಕಿದರೆ ನನ್ನದು ಎಷ್ಟು ಪ್ರಶ್ನೆಯಾಗುತ್ತದೆ ಹೇಳಿ.

ಅಧ್ಯಕ್ಷರು: ತಪ್ಪದೆ ಮುಂದಿನ ವಾರ ತೆಗೆದುಕೊಳ್ಳೋಣ. ಶ್ರೀ ಸುರೇಶ್ ಕುಮಾರ್ ಅವರ ಪ್ರಶ್ನೆಗೆ ಅಂದರೆ 2773ನೇ ಪ್ರಶ್ನೆಗೆ ಸರ್ಕಾರ ಒಂದು ವಾರ ಸಮಯ ಕೇಳಿದೆ.

ಶ್ರೀ ಎನ್.ಸುರೇಶ್ ಕುಮಾರ್: ಮಾನ್ಯ ಅಧ್ಯಕ್ಷರೆ, ನಾನು ಪ್ರಶ್ನೆ ಕೇಳಿರುವುದು 6-3-2000ದಂದು. ಇನ್ನೂ ಕೂಡ ಸಮಯ ಬೇಕು ಎಂದು ಕೇಳಿದರೆ ಏನರ್ಥ? ನಾನು ಬಹಳ ಸಣ್ಣ ಪ್ರಶ್ನೆ ಕೇಳಿದ್ದೇನೆ. ಆ ಮೈದಾನವನ್ನು ಯಾರಿಗೆ ಲೀಸ್‌ಗೆ ಕೊಟ್ಟಿದ್ದೀರಿ ಎಂದು ಕೇಳಿದ್ದೇನೆ.

ಶ್ರೀ ಎಸ್.ಎಂ.ಕೃಷ್ಣ: ಮುಂದಿನ ವಾರ ನಿಮಗೆ ಉತ್ತರವನ್ನು ಒದಗಿಸಿಕೊಡುತ್ತೇನೆ.

ಶ್ರೀ ಎನ್.ಸುರೇಶ್ ಕುಮಾರ್: ನಿಮ್ಮ ಉತ್ತರ ಉಪ ಪ್ರಶ್ನೆಯನ್ನು ಕೇಳುವ ತರಹ ಸದನದಲ್ಲಿಯೇ ಕೊಡಬೇಕು.

ಶ್ರೀ ಎಸ್.ಎಂ.ಕೃಷ್ಣ: ಆಗಬಹುದು.

ವಿಧಾನ ಸಭಾ ಸದಸ್ಯರ ಆಪ್ತ ಸಹಾಯಕರ ಪ್ರಯಾಣಭತ್ಯೆ ಮತ್ತು ಇತರೆ ಭತ್ಯೆ ಬಗ್ಗೆ.

299(2755)

ಶ್ರೀ ಅಪ್ಪಚ್ಚು ರಂಜನ್ ಎಂ.ಪಿ.(ಸೋಮವಾರ ಪೇಟೆ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ರಾಜ್ಯದ ಎಲ್ಲಾ ವಿಧಾನಸಭಾ ಸದಸ್ಯರಿಗೆ ಸರ್ಕಾರದಿಂದ ನೇಮಿಸಲ್ಪಟ್ಟಿರುವ ಆಪ್ತಸಹಾಯರಕರುಗಳ ಪ್ರವಾಸ ಕಾಲದಲ್ಲಿ ತಗಲುವ ಪ್ರವಾಸಭತ್ಯೆ ಮತ್ತು ಇತರೆ ಭತ್ಯೆಯನ್ನು ಎಲ್ಲಿಂದ ಮಂಜೂರು ಮಾಡಲಾಗುವುದು

(ಆ) ಎಂದು ಮಂಜೂರು ಮಾಡಲಾಗುವುದು

(ಇ) ಯಾವ ಮಾನದಂಡದ ಆಧಾರದ ಮೇಲೆ ನಿಗಧಿಪಡಿಸಲಾಗುವುದು?

ಶ್ರೀ ಎಸ್.ಎಂ.ಕೃಷ್ಣ (ಮುಖ್ಯಮಂತ್ರಿಗಳು):

(ಅ) ಹಾಲಿ ಸರ್ಕಾರಿ ಆದೇಶದನ್ವಯ ವಿಧಾನಸಭಾ ಸದಸ್ಯರುಗಳ ಆಪ್ತ ಸಹಾಯಕರುಗಳಿಗೆ ಪ್ರವಾಸಭತ್ಯೆ ಮತ್ತು ಇತರೆ ಭತ್ಯೆಗಳನ್ನು ನೀಡಲು

ಅವಕಾಶವಿರುವುದಿಲ್ಲ.

ಆ ಮತ್ತು ಇ) ಮೇಲಿನ ಉತ್ತರದಿಂದಾಗಿ ಈ ಪ್ರಶ್ನೆಗಳು ಉದ್ಭವಿಸುವುದಿಲ್ಲ.

ಶ್ರೀ ಎಂ.ಪಿ.ಅಪ್ಪಚ್ಚು ರಂಜನ್: ಮಾನ್ಯ ಅಧ್ಯಕ್ಷರೆ, ಹಾಲಿ ಸರ್ಕಾರಿ ಆದೇಶದನ್ವಯ ವಿಧಾನಸಭಾ ಸದಸ್ಯರುಗಳ ಆಪ್ತ ಸಹಾಯಕರುಗಳಿಗೆ ಪ್ರವಾಸಭತ್ಯೆ ಮತ್ತು ಇತರೆ ಭತ್ಯೆಗಳನ್ನು ನೀಡಲು ಅವಕಾಶವಿರುವುದಿಲ್ಲ ಎಂದು ಹೇಳಿದ್ದಾರೆ. ಆ ಅವಕಾಶನ್ನು ಒದಗಿಸಿಕೊಡಬೇಕೆಂದು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಯವರನ್ನು ಕೇಳಿಕೊಳ್ಳುತ್ತೇನೆ. ಕಾರಣವೇನೆಂದರೆ, ವಿಧಾನಸಭೆ ನಡೆಯುವಂಥ ಸಂದರ್ಭದಲ್ಲಿ ನಮ್ಮ ಆಪ್ತಸಹಾಯಕರನ್ನು ನಾವು ಇಲ್ಲಿಗೆ ಕರೆದುಕೊಂಡು ಬರಬೇಕಾಗುತ್ತದೆ. ಆದರೆ ಅವರು ಇಲ್ಲಿಗೆ ಬಂದಾಗ ಅವರು ಖರ್ಚನ್ನು ನಾವೇ ಭರಿಸಬೇಕಾಗುತ್ತದೆ. ಕೊನೆಯ ಪಕ್ಷ ಕನಿಷ್ಟ ಭತ್ಯೆಯಾದರೂ ಅವರಿಗೆ ಸಿಗುವಂತಾದರೆ ಬಹಳ ಒಳ್ಳೆಯದಾಗುತ್ತದೆ. ಮೊನ್ನೆ ಪ್ರಜಾವಾಣಿ ಪತ್ರಿಕೆಯಲ್ಲಿ ಲೋಕಸಭಾ ಸದಸ್ಯರಿಗೆ ಹೊಸ ಕಾರು, ಆಪ್ತ ಸಿಬ್ಬಂದಿಗಳನ್ನು ಕೊಡಲಾಗುವುದು ಎಂದು ಬಂದಿದೆ. ಬಹುಶಃ ಈ ಬೇಡಿಕೆ ನನ್ನದು ಮಾತ್ರ ಅಲ್ಲ ಎಲ್ಲಾ ಮಾನ್ಯ ಸದಸ್ಯರ ಬೇಡಿಕೆ ಕೂಡ ಇರಬಹುದು ಎಂದು ನಾನು ಭಾವಿಸುತ್ತೇನೆ. ನಮಗೆ ಒದಗಿಸಿರುವ ಆಪ್ತ ಸಹಾಯಕರುಗಳಿಗೆ ಅಟ್‌ಲೀಸ್ಟ್ ಮಿನಿಮಮ್ ಭತ್ಯೆ ಕೊಡಬೇಕು ಎಂಬುದನ್ನು ನಿಗಧಿ ಮಾಡಬೇಕು. ಏಕೆಂದರೆ, ನಾವು ಅವರನ್ನು ಬೆಂಗಳೂರಿಗೆ ಕರೆದುಕೊಂಡು ಬಂದಾಗ ಅವರ ಎಲ್ಲಾ ಖರ್ಚನ್ನು ನಾವೇ ಭರಿಸಬೇಕಾಗುತ್ತದೆ. ಸನ್ಮಾನ್ಯ ಮುಖ್ಯಮಂತ್ರಿಗಳು ಇದಕ್ಕೆ ಉತ್ತರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಎಂ.ಕೃಷ್ಣ: ಮಾನ್ಯ ಅಧ್ಯಕ್ಷರೆ, ರಾಜ್ಯದ ಸಂಪನ್ಮೂಲಗಳು ಅನುಕೂಲ ಒದಗಿಸಿಕೊಟ್ಟಲ್ಲಿ ನಿಮ್ಮ ಸಲಹೆಯನ್ನು ಪರಿಶೀಲಿಸಬಹುದಾಗಿದೆ. ಲೋಕಸಭಾ ಸದಸ್ಯರಿಗೆ ಕೊಟ್ಟಿರುವ ಹೊಸ ಕಾರು ಇದೇನು ಹೊಸ ನೀತಿ ಏನಲ್ಲ. ಹಿಂದೆ ಇದಕ್ಕೆ ಅನುಸರಿಸುತ್ತಿರುವ ಮಾರ್ಗಸೂಚಿಗಳನ್ನು ಈಗಲೂ ಇದಕ್ಕೆ ಅಳವಡಿಸುತ್ತಿದ್ದೇವೆ. ಆದರೆ ಕೆಲವಾರು ಹೊಸ ಜಿಲ್ಲೆಗಳಾದ ಮೇಲೆ ಅಲ್ಲಿ ಕಾರುಗಳು ಇರಲಿಲ್ಲ, ಆದ್ದರಿಂದ, ಪ್ರತಿಯೊಂದು ಜಿಲ್ಲೆಯ ಸಂಸತ್ ಸದಸ್ಯರಿಗೆ ಒಂದು ವಾಹನವನ್ನು ಒದಗಿಸಬೇಕು ಎನ್ನುವುದು ಹಿಂದಿನ ಹಲವಾರು ಸರ್ಕಾರಗಳು ತೆಗೆದುಕೊಂಡಿರುವ ತೀರ್ಮಾನ. ಆ ತೀರ್ಮಾನದಂತೆ ಇದಕ್ಕೆ ನಾವು 6 ಲಕ್ಷ ರೂಪಾಯಿಗಳ ಸೀಲಿಂಗ್ ಲಿಮಿಟ್‌ನ್ನು ಫಿಕ್ಸ್ ಮಾಡಿದ್ದೇವೆ. ಇದು ಸಚಿವರಿಗೂ, ವಿರೋಧ ಪಕ್ಷದ ನಾಯಕರಿಗೂ, ಮತ್ತೊಬ್ಬರಿಗೂ ಅಪ್ಲೈ ಆಗುತ್ತದೆ. ಈಗಾಗಲೇ ಅವರಿಗೆ ಒಬ್ಬ ಆಪ್ತ ಕಾರ್ಯದರ್ಶಿ ಇದ್ದರು ಇದರ ಜೊತೆಗ ಇನ್ನೊಬ್ಬರನ್ನು ಜಾಸ್ತಿ ಮಾಡಿಕೊಟ್ಟಿದ್ದೇವೆ.

ಶ್ರೀ ಸಿ.ಬೈರೇಗೌಡ: ಮಾನ್ಯ ಅಧ್ಯಕ್ಷರೆ, ಈ ಆಪ್ತ ಸಹಾಯಕರುಗಳನ್ನು ನೇಮಕ ಮಾಡುವಂಥ ಸಂದರ್ಭದಲ್ಲಿ ಕೆಲವು ನಿಬಂಧನೆಗಳಿವೆ. ಯಾರ ಮೇಲೆ ನಂಬಿಕೆ,

ವಿಶ್ವಾಸ ಇರುತ್ತದೆ ಅಂಥವರನ್ನು ಶಾಸಕರು ಆಪ್ತ ಸಹಾಯಕರುಗಳನ್ನಾಗಿ ನೇಮಿಸಿಕೊಳ್ಳುತ್ತಾರೆ. ಆದರೆ ಕೆಲವು ಕಡೆ ಆ ಜಿಲ್ಲೆಯಲ್ಲಿರುವಂಥವರನ್ನೇ ಆಪ್ತ ಸಹಾಯಕರಾಗಿ ಪಡೆದುಕೊಳ್ಳಬೇಕು ಎನ್ನುವ ನಿಬಂಧನೆ ಇದೆ. ಇದನ್ನು ತೆಗೆಯಬೇಕು. ಸಚಿವಾಲಯದ ಸಿಬ್ಬಂದಿಯಾಗಲಿ, ಪ್ರಧಾನ ಮಂಡಲದ ಸಿಬ್ಬಂದಿಯಾಗಲಿ ಅಥವಾ ಯಾರನ್ನಾದರೂ ತೆಗೆದುಕೊಳ್ಳಲಿಕ್ಕೆ ಅಡ್ಡಿಯಾಗಿರುವ ನಿಬಂಧನೆಯನ್ನು ನೀವು ತೆಗೆದು ಹಾಕುತ್ತೀರಾ?

ಶ್ರೀ ಎಸ್.ಎಂ.ಕೃಷ್ಣ: ಮಾನ್ಯ ಅಧ್ಯಕ್ಷರೆ, ಈಗಾಗಲೇ ಅದನ್ನು ಮಾಡಿದ್ದೇವೆ. "It was decided that the legislators should be permitted to draft the service of any Government Servant working anywhere in the State Government Service."

ಶ್ರೀ ಎಂ.ಪಿ.ಅಪ್ಪಚ್ಚು ರಂಜನ್: ಇದು ಆಗಿದೆ. ಭತ್ಯೆಯ ವಿಷಯಕ್ಕೆ ಸಂಬಂಧಿಸಿದಂತೆ ಮಿನಿಮಮ್ ಅವರೂ ಫಿಕ್ಸ್ ಮಾಡಬೇಕು. ಅವರು ಇದಕ್ಕಾಗಿ ಒಡಾಟ ಮಾಡುವುದು ಬೇಡ, ತಿಂಗಳಿಗೆ ಇಂತಿಷ್ಟು ಭತ್ಯೆ ತೆಗೆದುಕೊಳ್ಳಬೇಕು ಎಂದು ಒಂದು ಕಾಯಿದೆಯನ್ನು ಹೊರಡಿಸಿದರೆ ಒಳ್ಳೆಯದೆಂದು ನನ್ನ ಅಭಿಪ್ರಾಯ.

ಶ್ರೀ ಸಿ.ಬೈರೇಗೌಡ: ನಾನು ಈ ಪ್ರಶ್ನೆ ಏಕೆ ಕೇಳಿದೆ ಎಂದರೆ, ನಾನು ಸಚಿವಾಲಯದ ಸೇವೆಯಲ್ಲಿರುವವರನ್ನು ನನ್ನ ಆಪ್ತ ಸಹಾಯಕನಾಗಿ ತೆಗೆದುಕೊಂಡಿರುತ್ತೇನೆ. ಈ ಬಗ್ಗೆ ತಮಗೆ ಪತ್ರ ಬರೆದಾಗ ತಾವು ವಿಶೇಷವಾಗಿ ಆಜ್ಞೆ ಮಾಡಿದ್ದರಿಂದ ಅದು ಸಾಧ್ಯವಾಯಿತು. ಹೀಗಿರುವಾಗ ಅವನಿಗೆ ಸಂಬಳ ಸಾರಿಗೆ ಕೊಡುವಾಗ ಇನ್ನೂ ಕೂಡ ತೊಂದರೆ ಇದೆ. ಯಾವ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದರೋ ಅಲ್ಲಿಯೇ ಸಂಬಳ ಸಾರಿಗೆ ತೆಗೆದುಕೊಳ್ಳುವುದಕ್ಕೆ ವ್ಯವಸ್ಥೆ ಮಾಡಬೇಕು. ಅದು ಬಿಟ್ಟು ಕೋಲಾರದಲ್ಲಿ ಅಥವಾ ತುಮಕೂರಿನಲ್ಲಿ ನೀವು ಸಂಬಳ ತೆಗೆದುಕೊಳ್ಳಿ ಎಂದು ಹೇಳಿದರೆ ಅದು ಸಾಧುವಲ್ಲ. ಬೆಂಗಳೂರಿನಲ್ಲಿ ಯಾವ ಇಲಾಖೆಗೆ ಸಂಬಂಧಪಟ್ಟಿರುತ್ತಾನೋ ಅವನು ಅಲ್ಲಿಯೇ ಸಂಬಳ ತೆಗೆದುಕೊಳ್ಳುವುದಕ್ಕೆ ಈಗಿರುವ ನಿಬಂಧನೆಗಳನ್ನು ಬದಲಾಯಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಉದಾಹರಣೆಗೆ ನನಗೆ ಕೊಟ್ಟಿರುವ ಸಿಬ್ಬಂದಿಗೆ ಕೋಲಾರದಲ್ಲಿ ಸಂಬಳ ತೆಗೆದುಕೊಳ್ಳಿ ಎಂದರೆ ಹೇಗೆ? ಹೀಗಾದಾಗ ಸಚಿವಾಲಯದಲ್ಲಿ ಸೇವೆ ಸಲ್ಲಿಸುವ ನೌಕರರಿಗೆ ಸಂಬಳ ಕಡಿಮೆಯಾಗುತ್ತದೆ, ಏಕೆಂದರೆ, ಬೆಂಗಳೂರಿನಲ್ಲಿರುವ ನೌಕರರುಗಳಿಗೆ ಹೆಚ್.ಆರ್.ಎ. ಹಾಗೂ ವಿಶೇಷವಾದ ಸೌಲಭ್ಯಗಳನ್ನು ಪಡೆಯಲು ಅರ್ಹರಿರುತ್ತಾರೆ. ಹೀಗಿದ್ದಾಗ ನನ್ನ ಹತ್ತಿರ ಬಂದು ಕೆಲಸ ಮಾಡಿದ ತಪ್ಪಿಗೆ, ಕೋಲಾರದಲ್ಲಿ ಬಂದು ಕಡಿಮೆ ಸಂಬಳ ತೆಗೆದುಕೊಳ್ಳುವ ಪರಿಸ್ಥಿತಿ ಉಂಟಾಗಿದೆ. ಈ ರೀತಿ ಅಗಬಾರದು ಎನ್ನುವ ದೃಷ್ಟಿಯಿಂದ ಇದಕ್ಕೆ ಇರುವ ನಿಬಂಧನೆಗಳನ್ನು ತೆಗೆದುಹಾಕಬೇಕೆಂದು ನಾನು ಕೇಳುತ್ತೇನೆ, ಏಕೆಂದರೆ ನನಗೆ

ಇರತಕ್ಕಂಥ ಪ್ರಾಕ್ಟಿಕಲ್ ಡಿಫಿಕಲ್ಟಿಯನ್ನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ.

ಶ್ರೀ ಎಸ್.ಎಂ.ಕೃಷ್ಣ: ಇರತಕ್ಕಂಥ ತೊಂದರೆಗಳನ್ನು ಸರಿಪಡಿಸುತ್ತೇನೆ.

ತರುವೇಕೆರೆಯಲ್ಲಿ ಅಗ್ನಿಶಾಮಕ ಠಾಣೆ ಪ್ರಾರಂಭಿಸುವುದು.

286(2916)

ಶ್ರೀ ಲಕ್ಷ್ಮೀನಾರಾಯಣ ಎಂ.ಡಿ.(ಅಣ್ಣಯ್ಯ) (ತರುವೇಕೆರೆ): ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯಪಿಟ್ಟು ಉತ್ತರಿಸುವರೆ?

ಅ) ತುರುವೇಕೆರೆಯಲ್ಲಿ ಅಗ್ನಿಶಾಮಕ ಠಾಣೆ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ತುರುವೇಕೆರೆಯಲ್ಲಿ ಅಗ್ನಿಶಾಮಕ ಠಾಣೆ ಪ್ರಾರಂಭಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಮಲ್ಲಿಕಾರ್ಜುನ್ ಖರ್ಗೆ (ಗೃಹ ಸಚಿವರು):

ಅ) ಹೌದು.

ಆ) ತುರುವೇಕೆರೆಯಲ್ಲಿ ಅಗ್ನಿಶಾಮಕ ಠಾಣೆಯನ್ನು ತೆರೆಯುವ ವಿಷಯವನ್ನು ಪರಿಶೀಲಿಸಲಾಗುವುದು.

ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ: ಮಾನ್ಯ ಅಧ್ಯಕ್ಷರೆ, ನನ್ನ (ಅ) ಪ್ರಶ್ನೆಗೆ ಹೌದು ಎಂದು ಹೇಳಿದ್ದಾರೆ. ಅದೇ ರೀತಿ ನನ್ನ (ಆ) ಪ್ರಶ್ನೆಗೆ ಪರಿಶೀಲಿಸಲಾಗುವುದು ಎಂದು ಸನ್ಮಾನ್ಯ ಮಂತ್ರಿಗಳು ಉತ್ತರ ಹೇಳಿದ್ದಾರೆ. ಬೆಂಗಳೂರಿನ ಒಂದು ಸಮಾರಂಭದಲ್ಲಿ ಮಾತನಾಡುತ್ತಾ ಎಲ್ಲಾ 175 ತಾಲ್ಲೂಕುಗಳಲ್ಲಿ ಅಗ್ನಿಶಾಮಕ ಠಾಣೆಗಳನ್ನು ಪ್ರಾರಂಭಿಸುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳಿರುವುದು ಕೆಲವು ಪತ್ರಿಕೆಗಳಲ್ಲಿ ವರದಿಯಾಗಿದೆ. ನನ್ನ ತಾಲ್ಲೂಕಿನಲ್ಲಿ ಕಳೆದ ಒಂದು ತಿಂಗಳುಗಳ ಹಿಂದೆ ಅನೇಕ ಮನೆಗಳು ಸುಟ್ಟವೆ, ಕೊಬ್ಬರಿ ದಾಸ್ತಾನು ಕೂಡ ಸುಟ್ಟಿದೆ. ಬೆಂಕಿ ಬಿದ್ದಾಗ ಪಕ್ಕದಲ್ಲಿರುವ ಅಗ್ನಿಶಾಮಕ ಠಾಣೆಗೆ ದೂರವಾಣಿ ಮಾಡಿ ಅವರು ಬರುವಷ್ಟರಲ್ಲಿ ಸಂಪೂರ್ಣವಾಗಿ ಸುಟ್ಟು ಹೋಗಿರುವಂಥ ಉದಾಹರಣೆ ಇದೆ. ಆದ್ದರಿಂದ, ನನ್ನ ತಾಲ್ಲೂಕಿಗೆ ತಕ್ಷಣ ಅಗ್ನಿಶಾಮಕ ಠಾಣೆಯನ್ನು ಈ ವರ್ಷದಲ್ಲೇ ಮಂಜೂರು ಮಾಡುವುದಕ್ಕೆ ಆಗುತ್ತದೆಯೇ ಎಂದು ಸನ್ಮಾನ್ಯ ಮಂತ್ರಿಗಳಲ್ಲಿ ಕೇಳಬಯಸುತ್ತೇನೆ.